1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರ:1569/2020

ಚಾಸಾ:1 ಪ್ರಾಸಾ:1

ದಿನಾಂಕ: 03.06.2026

ವಾಗ್ಮೂಲದವರ ಹೆಸರು : ಶ್ರೀ ಸತೀಶ್
ತಂದೆಯ ಹೆಸರು : ರಾಮ ಪೂಜಾರಿ
ವಯಸ್ಸು : 43 ವರ್ಷ
ಉದ್ಯೋಗ : ಪೈಟಿಂಗ್
ವಾಸ ಸ್ಥಳ : ಕುಂದಾಪುರ

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ದಿ:20-06-2020 ರಂದು ಶ್ರೀ ಚಂಡಿಕಾ ದುರ್ಗಪರಮೇಶ್ವರಿ ದೇವಸ್ಥಾನದ ಹತ್ತಿರ ನಾನು ನನ್ನ ದ್ವಿ ಚಕ್ರ ವಾಹನ ಬಾಬ್ತು ನಂಬ್ರ ಕೆಎ-20-ಡಬ್ಲ್ಯೂ-4131 ರಲ್ಲಿ ಬೆಳಗ್ಗೆ 10-30 ಗಂಟೆಗೆ ಹೋಗುತ್ತಿದ್ದಾಗ ಬಾಬು ನಾಯ್ಕ ಎಂಬುವರು ನನ್ನ ದ್ವಿ ಚಕ್ರ ವಾಹನಕ್ಕೆ ಹಿಂದಿನಿಂದ ಡಿಕ್ಕಿ ಪಡಿಸಿರುತ್ತಾರೆ. ಸದ್ರಿಯವರು ವೇಗವಾಗಿ ಬಂದು ಡಿಕ್ಕಿಪಡಿಸಿದ ಕಾರಣ ನಾನು ಬಿದ್ದಿರುತ್ತೇನೆ. ಆದರೆ ನನಗೆ ಪೆಟ್ಟಾಗಿರುವುದಿಲ್ಲ. ಸದ್ರಿ ಬಾಬು ನಾಯ್ಕ ರವರಿಗೆ ಸ್ವಲ್ಪ ಪೆಟ್ಟಾಗಿತ್ತು ಆದ ಕಾರಣ ಅವರನ್ನು ಆಸ್ಪತ್ರೆಗೆ ನಾನು ಸೇರಿಸಿರುತ್ತೇನೆ. ಸದ್ರಿ ಬಾಬು ನಾಯ್ಕ ರವರ ದ್ವಿ ಚಕ್ರ ವಾಹನ ನಂಬ್ರ ಕೆಎ-20-ಕ್ಯೂ-2675 ಆಗಿರುತ್ತದೆ. ಬಾಬು ನಾಯ್ಕರವರು ಆಸ್ಪತ್ರೆಗೆ ಸೇರಿಸಿ ನಾನು ಬಂದಿರುತ್ತೇನೆ. ಮೊದಲು ಅವರು ರಾಜಿ ಮಾಡುವಾ ಕೇಸು ಬೇಡ ಎಂದು ಹೇಳಿದ್ದರು. ನಂತರ ಅವರೇ ಕೇಸನ್ನು ಮಾಡಿದ್ದರು. ನಂತರ ನಾನು ದೂರನ್ನು ಕೊಟ್ಟಿರುತ್ತೇನೆ. ದಿ: 30-06-2020 ರಂದು ನಾನು ದೂರನ್ನು

ಕೊಟ್ಟಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಈಗ ಸಾಕ್ಷಿಗೆ ದೂರನ್ನು ತೋರಿಸಲಾಗಿದ್ದು, ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದ್ರಿ ದೂರನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದ್ರಿ ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿ ಸದ್ರಿ ಪೋಟೋದಲ್ಲಿರುವ ವಾಹನಗಳನ್ನು ನೋಡಿ ಗುರುತಿಸಿದ್ದು ಪೋಟೋಗಳನ್ನು ಕ್ರಮವಾಗಿ ನಿಪಿ-2 ರಿಂದ 5 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಸ್ ಜಿ ಎಸ್ ರವರಿಂದಃ</u>**

ನೀವು ಚಲಾಯಿಸುತ್ತಿದ್ದ ಮೋಟಾರು ಸೈಕಲಿನ ಮಾಲೀಕರು ಯಾರು ಎಂದರೆ ಸಾಕ್ಷಿ ನನ್ನ ಅಣ್ಣ ಪ್ರಕಾಶ ಎಂದು ನುಡಿಯುತ್ತಾರೆ. ಸದ್ರಿಯವರು ಏನು ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ಉಡುಪಿ ಎಸ್ ಪಿ ಕಚೇರಿಯಲ್ಲಿ ಪೊಲೀಸ್ ಎಂದು ನುಡಿಯುತ್ತಾರೆ. ನಿಮ್ಮ ತಪ್ಪು ಇದ್ದರೂ ನಿಮ್ಮ ಅಣ್ಣ ಪೊಲೀಸ್ ಆದ ಕಾರಣ ಆರೋಪಿಯು ನೀಡಿದ ದೂರನ್ನು ಪಡೆದುಕೊಂಡಿರುವುದಿಲ್ಲ ಹಾಗೂ ಸದ್ರಿ ದೂರನ್ನು ಪಡೆಯಬಾರದೆಂದು ಹೇಳಿದರು ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ರಾಜಿ ಮಾಡಿಕೊಳ್ಳೋಣ ಎಂದು ಹೇಳಿದ ಬಗ್ಗೆ ನಿಮ್ಮ ಬಳಿ ಯಾವುದಾದರೂ ದಾಖಲೆ ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಯಾರ ತಪ್ಪಿನಿಂದ ಅಪಘಾತ ಆಗಿತ್ತು ಎಂದು ನಿಮಗೆ ಅದೇ ಕ್ಷಣದಲ್ಲಿ ಮನವರಿಕೆ ಆಗಿತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದ್ರಿ ಅಪಘಾತ ನಿಮ್ಮ ತಪ್ಪಿ ನಿಂದ ಆಗಿದಲ್ಲ, ಆರೋಪಿಯ ತಪ್ಪಿ ನಿಂದ ಆಗಿದ್ದು ಎಂದು ನಿಮಗೆ ಮನವರಿಕೆ ಆದ ನಂತರ ದೂರನ್ನು ಕೊಡಲು ನಿಮಗೆ ಯಾವುದೇ ತೊಂದರೆ ಇದ್ದಿರಲಿಲ್ಲ ಎಂದರೆ ಸಾಕ್ಷಿ ತೊಂದರೆ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ.

ಆರೋಪಿಯು ನಿಮ್ಮ ವಿರುದ್ದ ದಿಃ 30-06-2020 ರಂದು ಸಂಜೆ 5 ಗಂಟೆಗೆ ದೂರನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದ್ರಿ ದೂರು ದಾಖಲಿಸಿದ ನಂತರ ನಿಮಗೆ ದೂರು ದಾಖಲಿಸಲು ಪೊಲೀಸ್ ಠಾಣೆಯಿಂದ ತಿಳುವಳಿಕೆ ಬಂದಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ರೀತಿ ಪೊಲೀಸರು ನಿಮಗೆ ತಿಳಿಸಿದ್ದರಿಂದ ನೀವು ಅದೇ ದಿನ ಸಂಜೆ 6 ಗಂಟೆಗೆ ದೂರನ್ನು ನೀಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಯು ನಿಮ್ಮ ವಿರುದ್ದ ನೀಡಿದ ದೂರಿನ ಬಗ್ಗೆ ಕ್ರೈಂ ನಂಬ್ರ 50/2020 ರಂತೆ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದೇ ರೀತಿ ನೀವು ಆರೋಪಿತರ ವಿರುದ್ದ ನೀಡಿದ ದೂರಿನ ಮೇರೆಗೆ ಕ್ರೈಂ ನಂಬ್ರ 51/2020 ರಂತೆ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನೀವು ನೀಡಿರುವ ದೂರಿನ ಮೇರೆಗೆ ಪೊಲೀಸರು ಆರೋಪಿಯ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಹಾಗೂ ಆರೋಪಿ ನೀಡಿದ ದೂರಿನ ಮೇರೆಗೆ ನಿಮ್ಮ ವಿರುದ್ದ ಬಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದ್ರಿ ಬಿ ಅಂತಿಮ ವರದಿಯನ್ನು ಆರೋಪಿಯು ಪ್ರಶ್ನಿಸಿದ್ದರಿಂದ ಪುನಃ ನಿಮ್ಮ ವಿರುದ್ದ ಪ್ರಕರಣದ ದಾಖಲಾಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದ್ರಿ ಪ್ರಕರಣ ದಾಖಲಾದ ನಂತರ ನೀವು ಸಿ.ಸಿ ನಂಬ್ರ 74/2024 ರಲ್ಲಿ ನ್ಯಾಯಾಲಯಕ್ಕೆ ಹಾಜರಾಗಿ ನನ್ನದೇ ತಪ್ಪು ಎಂದು ಒಪ್ಪಿಕೊಂಡು ದಂಡ ಕಟ್ಟಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಆರೋಪಿಯು ಅಪಘಾತದಲ್ಲಿ ಆದ ಗಾಯದ ಬಗ್ಗೆ ಪರಿಹಾರ ಕೇಳಿ ಅರ್ಜಿ ಸಲ್ಲಿಸಿದ್ದ ಬಗ್ಗೆ ನ್ಯಾಯಾಲಯದಿಂದ ನಿಮಗೆ ನೊಟೀಸು ಬಂದಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದ್ರಿ ಅರ್ಜಿಯಲ್ಲಿ ಅಪಘಾತವು ನಿಮ್ಮ ತಪ್ಪಿನಿಂದಲೇ ಆಗಿರುತ್ತದೆ ಎಂದು ಆರೋಪಿಯು ಹೇಳಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು

ನುಡಿಯುತ್ತಾರೆ. ಆ ಬಗ್ಗೆ ನೀವು ಯಾವುದೇ ತಕರಾರು ಹಾಕಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದರಲ್ಲಿ ವಿಮಾ ಕಂಪೆನಿಯವರು ನಿಮ್ಮನ್ನು ಸಾಕ್ಷಿ ಮಾಡಿಸಿದಾಗ ಅದರಲ್ಲೂ ಸಹ ನೀವು ನನ್ನದೇ ತಪ್ಪು ಆಗಿರುತ್ತದೆ ಎಂದು ಹೇಳಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಆ ರೀತಿ ಹೇಳಿದ ಪ್ರಕಾರ ನಿಮ್ಮ ತಪ್ಪನ್ನು ಪರಿಗಣಿಸಿ ಆರೋಪಿಗೆ ವಿಮಾ ಹಣ ಮಂಜೂರು ಆಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಅಪಘಾತವಾದ ದಿನವೇ ನಿಮ್ಮ ತಪ್ಪಿ ನಿಂದ ಅಪಘಾತವಾಗಿರುತ್ತದೆ ಎಂದು ನಿಮಗೆ ಅರಿವು ಇದ್ದರೂ ಸಹ ನಿಮ್ಮ ಅಣ್ಣ ಪೊಲೀಸ್ ಆದ ಕಾರಣ ಹಾಗೂ ಸದ್ರಿ ವಾಹನವು ಅವರದ್ದು ಆಗಿರುತ್ತದೆ ಎಂಬ ಕಾರಣದಿಂದ ಪೊಲೀಸರು ಪ್ರತಿಷ್ಠೆಯಾಗಿ ಪರಿಗಣಿಸಿ ಆರೋಪಿಯ ವಿರುದ್ದ ಸುಳ್ಳು ದೂರನ್ನು ದಾಖಲಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದ್ರಿ ದಿನದಂದು ನೀವು ವಾಹನವನ್ನು ಅತೀ ವೇಗವಾಗಿ ಚಲಾಯಿಸಿ ಆರೋಪಿ ವಾಹನಕ್ಕೆ ಡಿಕ್ಕಿಪಡಿಸಿದ್ದರಿಂದ ಆರೋಪಿಗೆ ಏಟುಗಳು ಆಗಿರುತ್ತದೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**